# Akashvani : Bangalore
# National Bulletin In Kannada
# 08.09.2024 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.09.2024 / 7.35 am**

**<><*<><>*><>**

<u>ಮುಖ್ಯಾಂಶಗಳು</u>

೧. ಕೃತಕ ಬುದ್ಧಿಮತ್ತೆ ವಲಯದಲ್ಲಿ ಸಚಿವ ಅಶ್ವಿನಿ ವೈಷ್ಣವ್ ಸಾಧನೆಗೆ ಟೈಮ್ ಪತ್ರಿಕೆಯ ಮನ್ನಣೆ; ನೂರು ಪ್ರಭಾವಶಾಲಿಗಳ ಪಟ್ಟಿಗೆ ಸೇರ್ಪಡೆ

೨. ಬೆಂಗಳೂರು ಉಪನಗರ ರೈಲು ಯೋಜನೆ ಕುರಿತು ನಾಳೆ ಸಚಿವ ವಿ.ಸೋಮಣ್ಣ ನೇತೃತ್ವದಲ್ಲಿ ಮಹತ್ವದ ಸಭೆ

೩. ಪ್ರವಾಸೋದ್ಯಮ ಅಭಿವೃದ್ಧಿ ಕುರಿತಂತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ನೇತೃತ್ವದಲ್ಲಿ ನಾಳೆ ಬೆಂಗಳೂರಿನಲ್ಲಿ ದಕ್ಷಿಣ ವಲಯದ ಸಮಾವೇಶ

೪. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಕ್ರೀಡಾಪಟುಗಳ ಸಾಧನೆಗೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಶ್ಲಾಘನೆ

**<><*<><>*><>**

ಕೃತಕ ಬುದ್ಧಿಮತ್ತೆ ವಲಯದಲ್ಲಿ ಜಗತ್ತಿನ ನೂರು ಪ್ರಭಾವಶಾಲಿ ವ್ಯಕ್ತಿಗಳನ್ನು ಟೈಮ್ ಪತ್ರಿಕೆ ಪ್ರಕಟಿಸಿದ್ದು, ಅದರಲ್ಲಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸ್ಥಾನ ಪಡೆದಿದ್ದಾರೆ. ಅಶ್ವಿನಿ ವೈಷ್ಣವ್ ಅವರು, ಕೃತಕ ಬುದ್ಧಿಮತ್ತೆ ವಲಯದಲ್ಲಿ ಮಾಡಿರುವ ಗಣನೀಯ ಸೇವೆಯನ್ನು ಪರಿಗಣಿಸಿ, ಅವರಿಗೆ ಈ ಗೌರವ ಸಮರ್ಪಿಸಲಾಗಿದೆ. ಅಶ್ವಿನಿ ವೈಷ್ಣವ್ ಅವರ ನಾಯಕತ್ವದಲ್ಲಿ ಭಾರತ ಜಗತ್ತಿನ ಪ್ರಮುಖ ಐದು ಶ್ರೇಷ್ಠ ಸೆಮಿ ಕಂಡಕ್ಟರ್ ಉತ್ಪಾದನಾ ವಲಯಗಳ ವ್ಯಾಪ್ತಿಗೆ ಸೇರ್ಪಡೆಯಾಗಿದೆ. ಇದು ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದು, ಮುಂದಿನ ಐದು ವರ್ಷಗಳಲ್ಲಿ ಮತ್ತಷ್ಟು ಸಾಧನೆಗೈದು ಸಹಕಾರಿಯಾಗಲಿದೆ ಎಂದು ಟೈಮ್ ಪತ್ರಿಕೆ ತನ್ನ ಲೇಖನದಲ್ಲಿ ಹೇಳಿದೆ.

**<><*<><>*><>**

ದೇಶದ ಆರೋಗ್ಯ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಯಾಗುತ್ತಿದ್ದು, ಮೂಲಸೌಕರ್ಯ ಮತ್ತು ತಂತ್ರಜ್ಞಾನ ಅಭಿವೃದ್ಧಿಯೊಂದಿಗೆ ವೈದ್ಯಕೀಯ ವಲಯ ಸಮಗ್ರ ಪ್ರಗತಿ ಕಾಣುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಹೇಳಿದ್ದಾರೆ.  ಬಿಹಾರದ ದರ್ಭಾಂಗ ಮತ್ತು ಮುಜಫರ್‌ಪುರದಲ್ಲಿ ನಿನ್ನೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಉದ್ಘಾಟಿಸಿದ ಅವರು, ದೇಶದ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಕಳೆದ ಹತ್ತು ವರ್ಷಗಳಲ್ಲಿ ೨೮೭ ರಿಂದ ೭೩೧ ಕ್ಕೆ ಏರಿಕೆಯಾಗಿದೆ ಎಂದರು.

**<><*<><>*><>**

ಭಾರತ-ಗಲ್ಫ್ ಸಹಕಾರ ಮಂಡಳಿಯ ಪ್ರಥಮ ಸಮಾವೇಶದಲ್ಲಿ ಭಾಗವಹಿಸಲು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ಇಂದು ಸೌದಿಅರೇಬಿಯಾದ ರಿಯಾಧ್‌ಗೆ ತೆರಳಲಿದ್ದಾರೆ. ಎರಡು ದಿನಗಳ ಭೇಟಿಯಲ್ಲಿ ಗಲ್ಫ್ ಒಕ್ಕೂಟದ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಪ್ರವಾಸದ ಎರಡನೇ ಚರಣದಲ್ಲಿ ಡಾ.ಎಸ್.ಜೈಶಂಕರ್ ಅವರು, ಮಂಗಳವಾರ ಜರ್ಮನ್‌ನ ಬರ್ಲಿನ್‌ಗೆ ತೆರಳಲಿದ್ದಾರೆ.

<><*<><>*><>

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಕರ್ನಾಟಕದ ಬೆಂಗಳೂರಿನ ಯಲಹಂಕದಲ್ಲಿರುವ ಗಾಲಿ ಮತ್ತು ಅಚ್ಚು ಕಾರ್ಖಾನೆಗೆ ನಾಳೆ ಭೇಟಿ ನೀಡಲಿದ್ದಾರೆ. ಕಾರ್ಖಾನೆಯ ಅಭಿವೃದ್ಧಿ ಯೋಜನೆಗಳ ಕುರಿತಂತೆ ಅವರು ಪರಾಮರ್ಶೆ ನಡೆಸಲಿದ್ದಾರೆ. ಬಳಿಕ ಸಚಿವರು ರಾಜ್ಯ ಸರ್ಕಾರದ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರೊಂದಿಗೆ ನನೆಗುದಿಗೆ ಬಿದ್ದಿರುವ ರಾಜ್ಯಸರ್ಕಾರದ ಯೋಜನೆಗಳ ಬಗ್ಗೆ ಚರ್ಚಿಸಲಿದ್ದಾರೆ. ಸಚಿವರು ಇದೇ ಸಂದರ್ಭದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಗಳ ಕುರಿತಂತೆ ರೈಲ್ವೆ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

<><*<><>*><>

ಬಿಹಾರದ ಪಟ್ನಾದಲ್ಲಿ ನಡೆದ 'ಬಿಜೆಪಿ ರಾಷ್ಟ್ರೀಯ ಸದಸ್ಯತ್ವ ಅಭಿಯಾನ'ದ ಅಡಿ, ಪರಿಶಿಷ್ಟ ಜಾತಿ ಸಮುದಾಯದ ಜನರಿಗೆ ಸದಸ್ಯತ್ವ ನೀಡುವ ಕಾರ್ಯಕ್ರಮಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನಿನ್ನೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ದೇಶಾದ್ಯಂತ, ಭಾರತೀಯ ಜನತಾ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಇದಾಗಲೇ ಪಕ್ಷದಲ್ಲಿ ೧೮ ಕೋಟಿ ಜನರಿದ್ದು, ಈ ಬಾರಿ ಇನ್ನೂ ೧೦ ಕೋಟಿಗೂ ಅಧಿಕ ಸದಸ್ಯತ್ವ ನೊಂದಣಿ ಮಾಡುವ ಗುರಿ ಹೊಂದಲಾಗಿದೆ ಎಂದು ಹೇಳಿದರು. ಪ್ರಧಾನಿ ಅವರಿಂದ ಹಿಡಿದು, ಬೂತ್ ಮಟ್ಟದ ಅಧ್ಯಕ್ಷರವರೆಗೆ, ಎಲ್ಲಾ ಹಂತದ ಸಂಘಟನೆಗಳು ಪ್ರತಿ ೬ ವರ್ಷಗಳಿಗೊಮ್ಮೆ ತಮ್ಮ ಸದಸ್ಯತ್ವವನ್ನು ನವೀಕರಿಸುತ್ತಿರುವ ಏಕೈಕ ಪಕ್ಷ ಬಿಜೆಪಿಯಾಗಿದೆ ಎಂದ ಜೆ.ಪಿ.ನಡ್ಡಾ, ವಿಕಸಿತ ಭಾರತದ ಕಲ್ಪನೆಯನ್ನು ಸಾಕಾರಗೊಳಿಸಲು ಕೈಜೋಡಿಸುತ್ತಿರುವ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ಬಿಜೆಪಿ, ಸದಾ ದಲಿತರು ಮತ್ತು ಹಿಂದುಳಿದ ವರ್ಗಗಳ ಪರವಾಗಿ ನಿಂತಿದೆ. ಉಳಿದ ಪಕ್ಷಗಳು ಈ ಸಮಯದಾಯವನ್ನು ರಾಜಕೀಯ ಗಾಳವಾಗಿ ಬಳಸಿಕೊಳ್ಳುತ್ತಿವೆ. ಅವರಿಗೆ ಹಕ್ಕುಗಳನ್ನು ಎಂದಿಗೂ ನೀಡಲಿಲ್ಲ, ಅವರ ಬಗ್ಗೆ ಎಂದಿಗೂ ಚಿಂತಿಸಲಿಲ್ಲ ಎಂದ ಅವರು, ಇದಾಗಲೇ ಕೇಂದ್ರದಿಂದ ಜಾರಿಗೊಳಿಸಿರುವ ಯೋಜನೆಗಳ ಮಾಹಿತಿ ನೀಡಿದರು.

<><*<><>*><>

ಅಂತಾರಾಷ್ಟ್ರೀಯ ಸಮೀಕ್ಷಾ ಸಂಸ್ಥೆ ಮೋರ್ಗನ್ ಸ್ಟ್ಯಾನ್ಲಿ ವರದಿ ಅನುಸಾರ, ಪ್ರಸಕ್ತ ತಿಂಗಳಲ್ಲಿ, ಭಾರತ ಉದಯೋನ್ಮುಖ ಮಾರುಕಟ್ಟೆ-ಬಂಡವಾಳ ಮಾರುಕಟ್ಟೆ ಸೂಚ್ಯಂಕ -MSCI IMI ಚೀನಾವನ್ನು ಹಿಂದಿಕ್ಕಿ ಭಾರತ ಮುನ್ನಡೆದಿದೆ. ವರದಿಯ ಪ್ರಕಾರ, ಈ ಸೂಚ್ಯಂಕದಲ್ಲಿ ಭಾರತ ಶೇ. ೨೨.೨೭ ರಷ್ಟು ಏರಿಕೆ ಕಂಡಿದೆ. ಆದರೆ ಚೀನಾ ಶೇ. ೨೧.೫೮ ಕ್ಕೆ ಇಳಿದಿದೆ. MSCI IMI ಒಟ್ಟು ೩,೩೫೫ ಷೇರುಗಳನ್ನು ಒಳಗೊಂಡಿದ್ದು, ಇದು ೨೪ ಉದಯೋನ್ಮುಖ ಮಾರುಕಟ್ಟೆ ರಾಷ್ಟ್ರಗಳಾದ್ಯಂತ ವ್ಯಾಪ್ತಿ ಹೊಂದಿದೆ. ಸೂಚ್ಯಂಕದಲ್ಲಿನ ಮರುಸಮತೋಲನವು ವ್ಯಾಪಕವಾದ ಮಾರುಕಟ್ಟೆ ಪ್ರವೃತ್ತಿಗಳನ್ನು ಪ್ರತಿಬಿಂಬಿಸುತ್ತದೆ. ಆರ್ಥಿಕ ಅಡೆತಡೆಗಳಿಂದಾಗಿ ಚೀನಾದ ಮಾರುಕಟ್ಟೆಗಳು ಸಂಕಷ್ಟ

ಎದುರಿಸುತ್ತಿರುವಾಗ, ಭಾರತದ ಮಾರುಕಟ್ಟೆಗಳು ಅನುಕೂಲಕರವಾದ ಸ್ಥೂಲ ಆರ್ಥಿಕ ಪರಿಸ್ಥಿತಿಗಳಿಂದ ಲಾಭ ಪಡೆದಿವೆ.

<><*<><>*><>

ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ನೇತೃತ್ವದಲ್ಲಿ ನಾಳೆ ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕುರಿತಂತೆ ಮಹತ್ವದ ಸಭೆ ನಡೆಯಲಿದೆ. ಬೆಂಗಳೂರಿನ ಗಂಗಾನಗರದ ಖಾಸಗಿ ಹೋಟೆಲ್ ನಲ್ಲಿ ದಕ್ಷಿಣ ಭಾರತದ ಪ್ರವಾಸೋದ್ಯಮದ ಬೆಳವಣಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಜಾರಿಯಲ್ಲಿರುವ ಯೋಜನೆಗಳ ಕುರಿತಂತೆ ಸಚಿವರು ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ.

<><*<><>*><>

ವನಸ್ಪತಿಯ ತಾಳೆ ಸಸಿ ನೆಡುವ ಬೃಹತ್ ಅಭಿಯಾನ-೨೦೨೪ರ ಅಂಗವಾಗಿ ಈವರೆಗೆ ದೇಶಾದ್ಯಂತ ೧೬ ಲಕ್ಷ ತಾಳೆ ಗಿಡಗಳನ್ನು ನೆಡಲಾಗಿದೆ. ರಾಷ್ಟ್ರೀಯ ವನಸ್ಪತಿ ತಾಳೆ ಗಿಡ ಅಭಿಯಾನವನ್ನು ಈ ವರ್ಷದ ಜುಲೈ ೧೫ ರಂದು ಜಾರಿಗೊಳಿಸಲಾಗಿದ್ದು, ಈವರೆಗೆ ಒಟ್ಟು ೧೫ ರಾಜ್ಯಗಳ ಸುಮಾರು ೧೨ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಗಿಡ ನೆಡಲಾಗಿದೆ.  ದೇಶದಲ್ಲಿ ತಾಳೆ ಎಣ್ಣೆ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಸಹಯೋಗದೊಂದಿಗೆ ಈ ಅಭಿಯಾನ ಅರಂಭಿಸಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ, ಛತ್ತೀಸ್‌ಗಢ, ಗೋವಾ, ಗುಜರಾತ್, ಕೇರಳ ಮುಂತಾದ ರಾಜ್ಯಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ತಿಂಗಳ ೧೫ರವರೆಗೆ ಅಭಿಯಾನ ಮುಂದುವರೆಯಲಿದೆ.

<><*<><>*><>

ಎಸ್ ಬಿ ಐ ಫೌಂಡೇಷನ್ ಸೌಲಭ್ಯವಂಚಿತ ಹಿನ್ನೆಲೆಯಿಂದ ಬಂದ ವಿದ್ಯಾವಂತ ವಿದ್ಯಾರ್ಥಿಗಳನ್ನು ಬೆಂಬಲಿಸುವ ತನ್ನ ಆಶಾ ವಿದ್ಯಾರ್ಥಿವೇತನ ಕಾರ್ಯಕ್ರಮದ ಮೂರನೇ ಆವೃತ್ತಿಗೆ ಚಾಲನೆ ನೀಡಿದೆ. ಈ ವಿದ್ಯಾರ್ಥಿವೇತನ ೧೫ ಸಾವಿರದಿಂದ ೨ ಲಕ್ಷ ರೂಪಾಯಿವರೆಗೆ ಇರುತ್ತದೆ ಮತ್ತು ೬ ನೇ ತರಗತಿಯಿಂದ ಸ್ನಾತಕೋತ್ತರ ಹಂತದ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. ಐಐಟಿಗಳು ಮತ್ತು ಐಐಎಂಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗಾಗಿ ವಿಶೇಷ ವಿದೇಶದಲ್ಲಿ ಶಿಕ್ಷಣ ಎಂಬ ವಿಶೇಷ ವರ್ಗವೂ ಒಳಗೊಂಡಿದೆ.   ಅರ್ಜಿಗಳು www.sbifashascholarship.org.ನಲ್ಲಿ ಈ ವರ್ಷದ ಅಕ್ಟೋಬರ್ ೧ ರವರೆಗೆ ದೊರೆಯುತ್ತದೆ.

<><*<><>*><>

ಅಬುಧಾಬಿಯ ರಾಜಕುಮಾರ ಶೇಖ್ ಖಲೀದ್ ಬಿನ್ ಮೊಹಮ್ಮದ್ ಬಿನ್ ಝುಯೇದ್ ಅಲ್ ನಹ್ಯಾನ್ ಅವರು, ಮೂರು ದಿನಗಳ ಭೇಟಿಗಾಗಿ ಇಂದು ಭಾರತಕ್ಕೆ ಆಗಮಿಸಲಿದ್ದಾರೆ. ಇದು ಅವರ ಪ್ರಥಮ ಭಾರತ ಭೇಟಿಯಾಗಿದೆ. ಅವರು, ನಾಳೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಸಹಕಾರ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಮಾಲೋಚನೆ ನಡೆಸಲಿದ್ದಾರೆ. ನಂತರ ಅವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದ್ದಾರೆ.

<><*<><>*><>

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ ನೀಡಲಾಗುವ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿ- ೨೦೨೫ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಶೌರ್ಯ, ಕಲೆ ಮತ್ತು ಸಂಸ್ಕೃತಿ, ಪರಿಸರ, ನಾವೀನ್ಯತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ ಮತ್ತು ಕ್ರೀಡೆಗಳಿಗೆ, ರಾಷ್ಟ್ರೀಯ ಮನ್ನಣೆಗೆ ಅರ್ಹವಾದ ಏಳು ವಿಭಾಗಗಳಲ್ಲಿ ೫ ರಿಂದ ೧೮ ವರ್ಷ ವಯಸ್ಸಿನ ಮಕ್ಕಳಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ ೧೫ ಕೊನೆಯ ದಿನವಾಗಿದೆ. ಮಾಹಿತಿಗೆ www.awards.gov.in ವೆಬ್‌ಸೈಟ್‌ಗೆ ಭೇಟಿ ಕೊಡಬಹುದು.

**<><*<><>*><>**

ಪ್ಯಾರೀಸ್‌ನಲ್ಲಿ ನಡೆದ ಪ್ಯಾರಾಂಪಿಕ್ಸ್‌ನಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ದೆಹಲಿಯಲ್ಲಿ ನಿನ್ನೆ ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ಅಭಿನಂದನೆ ಸಲ್ಲಿಸಿದರು. ಬಳಿಕ ಅವರು, ಈ ಬಾರಿ ೨೯ ಪದಕಗಳನ್ನು ಗೆಲ್ಲುವ ಮೂಲಕ ಕ್ರೀಡಾಪಟುಗಳು ಇಲ್ಲಿಯವರೆಗಿನ ದಾಖಲೆ ಮುರಿದಿದ್ದಾರೆ. ಇದು ಅತ್ಯಂತ ಸಂತೋಷದ ವಿಷಯ ಎಂದರು. ಟೊಕಿಯೊದಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಇನ್ನೂ ಹೆಚ್ಚಿನ ಪದಕಗಳನ್ನು ಕ್ರೀಡಾಪಟುಗಳು ಗೆಲ್ಲುವ ನಿರೀಕ್ಷೆಯಿದೆ. ಈಗ ಗೆಲುವು ಸಾಧಿಸದ ಕ್ರೀಡಾಪಟುಗಳು ನಿರಾಶರಾಗುವ ಅಗತ್ಯವಿಲ್ಲ. ನಾವು ಎಂದಿಗೂ ಸೋಲುವುದಿಲ್ಲ, ನಾವು ಗೆಲ್ಲುತ್ತೇವೆ ಅಥವಾ ಕಲಿಯುತ್ತೇವೆ ಎನ್ನುವ ಛಲದ ಜೊತೆ ಅವರು ಮುನ್ನಗಬೇಕಿದೆ ಎಂದು ಸಚಿವರು ಹೇಳಿದರು. ಇದಕ್ಕೂ ಮುನ್ನ ಪ್ಯಾರೀಸ್‌ನಿಂದ ಭಾರತಕ್ಕೆ ಮರಳಿದ ಕ್ರೀಡಾಪಟುಗಳಿಗೆ ದೆಹಲಿ ವಿಮಾನ ನಿಲ್ದಾಣದಲ್ಲಿ ಅದ್ದೂರಿಯಾಗಿ ಸ್ವಾಗತ ಕೋರಲಾಯಿತು

**<><*<><>*><>**

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಪುರುಷರ ಜ್ಯಾವಲೀನ್ ಎಸೆತ ಎಫ್ ೪೧ ರಲ್ಲಿ ಚಿನ್ನದ ಪದಕ ಗಳಿಸಿದ ನವದೀಪ್ ಸಿಂಗ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಪೋಸ್ಟ್ ನಲ್ಲಿ ಅವರು ನವದೀಪ್ ಸಿಂಗ್ ಅವರು ರಾಷ್ಟ್ರಕ್ಕೆ ಹೆಮ್ಮೆ ತಂದಿದ್ದಾರೆ ಎಂದು ಹೇಳಿದ್ದಾರೆ. ನವದೀಪ್ ಸಿಂಗ್ ಅವರು ತಮ್ಮ ಕಾರ್ಯಕ್ಷಮತೆಯಲ್ಲಿ ಗಣನೀಯ ಸುಧಾರಣೆ ತೋರಿದ್ದಾರೆ ಮತ್ತು ಅವರ ಕ್ರೀಡಾ ಪ್ರಯಾಣವನ್ನು ಗಮನಿಸುತ್ತಾ ಬಂದಿರುವ ಕ್ರೀಡಾ ಪ್ರೇಮಿಗಳು ಸಂತಸ ನೀಡಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನ್ ಕರ್ ಮತ್ತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ ೨೦೦ ಮೀಟರ್ ಟಿ೧೨ ಟ್ರ್ಯಾಕ್ ಈವೆಂಟ್ ಕಂಚಿನ ಪದಕ ಗೆದ್ದ ಸಿಮ್ರಾನ್ ಶರ್ಮಾ ಅವರನ್ನು ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಸಿಮ್ರನ್ ಅವರ ಸಾಧನೆಯನ್ನು ಶ್ಲಾಘಿಸಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಉದಯೋನ್ಮುಖ ಕ್ರೀಡಾಪಟುಗಳಿಗೆ ವಿಶೇಷವಾಗಿ ಬಾಲಕಿಯರಿಗೆ ಈ ಸಾಧನೆ ಸ್ಫೂರ್ತಿಯಾಗಲಿದೆ ಎಂದಿದ್ದು, ಭವಿಷ್ಯದಲ್ಲಿ ಸಿಮ್ರನ್ ಮತ್ತಷ್ಟು ಸಾಧನೆಗಳಿಂದ ದೇಶ ಹೆಮ್ಮೆ ಪಡುವಂತೆ ಮಾಡಲಿದ್ದಾರೆ ಎಂದು ಹೇಳಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನ್ ಕರ್ ಅವರು ಸಿಮ್ರನ್ ಅವರನ್ನು ಅಭಿನಂದಿಸಿದ್ದು, ಆಕೆಯ ಕಠಿಣ ಪರಿಶ್ರಮ, ಬದ್ಧತೆ ಈ ಮಹತ್ವದ ಮೈಲಿಗಲ್ಲು ಸಾಧನೆಗೆ ಕಾರಣವಾಗಿದೆ ಎಂದು ಪ್ರಶಂಸಿಸಿದ್ದಾರೆ. ಸಿಮ್ರನ್ ಶರ್ಮಾ ಅವರನ್ನು ಅಭಿನಂದಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಆಕೆಯ ಬದ್ಧತೆಯನ್ನು ಶ್ಲಾಘಿಸಿದ್ದಾರೆ. ಅಲ್ಲದೇ ಪದಕ ವಿಜೇತ ಕ್ರೀಡಾಪಟುಗಳೊಂದಿಗೆ ದೂರವಾಣಿಯಲ್ಲಿ ಸಂಭಾಷಣೆ ನಡೆಸಿ ಅವರನ್ನು ಅಭಿನಂದಿಸಿದ್ದಾರೆ.

**<><*<><>*><>**

ಮಧ್ಯ ರೈಲ್ವೆಯ ಮುಂಬೈ ವಿಭಾಗದಲ್ಲಿ ರಾಮವತಾರ್ ಮೀನಾ ಎನ್ನುವ ರೈಲಿನಲ್ಲಿ ಟಿಕೆಟ್ ಪರಿಶೀಲಿಸುವ ಉದ್ಯೋಗಿಯೊಬ್ಬರು ಮಹಿಳಾ ಪ್ರಯಾಣಿಕರೊಬ್ಬರನ್ನು ಕಾಪಾಡುವ ಮೂಲಕ ಅಪ್ರತಿಮ ಸಾಹಸ ಮೆರೆದಿದ್ದಾರೆ. ಶುಕ್ರವಾರದಂದು ಪುಣೆ ನಿಲ್ದಾಣಕ್ಕೆ ದೂರ ಪ್ರಯಾಣದ ರೈಲೊಂದು ಆಗಮಿಸುತ್ತಿದ್ದಾಗ, ಮಹಿಳಾ ಪ್ರಯಾಣಿಕರೊಬ್ಬರು ಆಕಸ್ಮಾತ್ತಾಗಿ ಜಾರಿ ಚಲಿಸುವ ರೈಲಿನ ಕೆಳಗೆ ಬೀಳುತ್ತಿದ್ದ ಸಂದರ್ಭದಲ್ಲಿ, ಈ ಘಟನೆಯನ್ನು ನೋಡಿದ ಮೀನಾ ಅವರು ತಕ್ಷಣವೇ ಅವರನ್ನು ಎಳೆದು ರೈಲುಹಳಿಯ ಮೇಲೆ ಬೀಳದಂತೆ ಕಾಪಾಡಿದ್ದಾರೆ. ರಾಮವತಾರ್ ಅವರ ಈ ಸಾಹಸವನ್ನು ರೈಲ್ವೇ ಇಲಾಖೆ ಗುರುತಿಸಿ ಪ್ರಶಂಸಿಸಿದೆ. ರೈಲು ಚಲಿಸುತ್ತಿರುವಾಗ ಹತ್ತುವುದು ಇಳಿಯುವುದು ಮಾಡಬಾರದು. ಮಾಡಿದಲ್ಲಿ ಜೀವಕ್ಕೆ ಅಪಾಯ ಎಂದು ಪ್ರಯಾಣಿಕರನ್ನು ಎಚ್ಚರಿಸಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>**